# ಆಹಾ ಸುದ್ದಿ!

★ ಸಸಿತೋಟ




ಅಮೆರಿಕನ್ನರು ಮತ್ತು ಬ್ರಿಟಿಷರು ಹೊಡೆದಾಡುತ್ತಿದ್ದಾರೆ- ಗಡಿರೇಖೆಗಾಗಿಯಲ್ಲ, ವಿಶ್ವದ ಅತ್ಯಂತ ಚಿಕ್ಕದಾದ ಪಾರ್ಕ್ ತಮ್ಮಲ್ಲೇ ಇದೆ ಎಂದು ಸಾಧಿಸಲು. ಅಮೆರಿಕದ ಒರೆಗಾನ್ ಪೋರ್ಟ್‌ಲ್ಯಾಂಡ್‌ನಲ್ಲಿರುವ ಎರಡು ಅಡಿ ವ್ಯಾಸದ ಈ ಪಾರ್ಕ್ ಗಿನ್ನೆಸ್ ಪುಸ್ತದಲ್ಲಿ ಈ ಹೆಗ್ಗಳಿಕೆ ಪಡೆದುಕೊಂಡಿದೆ. ಆದರೆ ಬ್ರಿಟಿಷರು ಇದೊಂದು ಪಾರ್ಕ್ ಅಲ್ಲವೆ ಅಲ್ಲ, ತಮ್ಮಲ್ಲಿರುವ 15 ಅಡಿ ಅಗಲ, 30 ಅಡಿ ಉದ್ದದ ಪಾರ್ಕ್‌ಗೆ ಈ ದಾಖಲೆ ಸಲ್ಲಬೇಕು ಎಂದು ಆನ್‌ಲೈನ್ ಯುದ್ಧ ಶುರು ಮಾಡಿದ್ದಾರೆ. ರಾಜಿ ಮಾಡಿಸಲು ಯಾರೂ ಸಿದ್ಧರಿಲ್ಲ.



ಚೀನಾ ಪ್ರವಾಸಕ್ಕೆ ಹೋಗುವುದಾದರೆ ಅಲ್ಲಿಯ ಶೇವಿಂಗ್ ವೈಖರಿ ಸವಿಯಲು ಮಾತ್ರ ಹೋಗಬೇಡಿ. ರೋಮ ಹೆರೆಯುವ ಕ್ಷೌರಕತ್ತಿಯೇ ನಿಮ್ಮ ಕಣ್ರೆಪ್ಪೆಯ ಪಿಸುರನ್ನು ಕೆತ್ತಿ ಹಾಕುತ್ತದೆ. ಸಂಪ್ರದಾಯವೆಂದರೆ ಪಾಲಿಸಲೇಬೇಕು ಎನ್ನುವ ಹಠ ಚೀನಿಯರಿಗೆ.

28 ವರ್ಷದ ಹಿಂದಿನ ಪ್ರಣಯ. ಪ್ರೇಮಪತ್ರವನ್ನು ಇಟ್ಟಿದ್ದು ಗಾಜಿನ ಸೀಸೆಯಲ್ಲಿ. ರವಾನೆ ರೀತಿಯೆಂದರೆ ಕೆನಡಾ ಬಳಿ ಸಾಗರದಲ್ಲಿ ತೇಲಿಬಿಟ್ಟಿದ್ದು. ಈ ಸೀಸೆ ಅಟ್ಲಾಂಟಿಕ್, ಜಿಬ್ರಾಲ್ಟರ್, ಮೆಡಿಟರೇನಿಯನ್, ಏಡ್ರಿಯಾಟಿಕ್ ಸಾಗರವನ್ನೆಲ್ಲ ದಾಟಿ 5,000 ಮೈಲು ದೂರ ಕ್ರಮಿಸಿ ಕ್ರಯೋಷಿಯದ ದಡಕ್ಕೆ ಬಂದು ಬಿದ್ದಿದೆ. ಜೋನಾಥನ್ ಎಂಬ ಯುವಕ ಮೇರಿ ಎಂಬಾಕೆಯನ್ನು ಮತ್ತೆ ಭೇಟಿ ಮಾಡುವುದಾಗಿ ಬರೆದಿದ್ದ ಈ ಪತ್ರದ ಸಾರಾಂಶ ಈಗ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಪ್ರೇಮಿಗಳ ಪತ್ತೆಗೆ ಯತ್ನ ನಡೆದಿದೆ. ಇಬ್ಬರೂ ಜೀವಂತವಿದ್ದರೆ.. ಬೇರೆಯವರನ್ನು ಮದುವೆಯಾಗಿ ಸುಖವಾಗಿದ್ದರೆ.. ಘಟಸ್ಫೋಟಕ್ಕೆ ಸಾಕ್ಷಿಯಾಗುವವರು ಈ ಜಾಲತಾಣದವರೇ.

ರಷ್ಯಾದ ಅಧ್ಯಕ್ಷ ಪುಟಿನ್ ಅವರ ಹೆಸರನ್ನು ಫಿನ್ಲೆಂಡ್‌ನ ಪೊಲೀಸರು ಆಕಸ್ಮಿಕವಾಗಿ ಕಪ್ಪುಪಟ್ಟಿಯಲ್ಲಿ ಸೇರಿಸಿದ್ದರಂತೆ. ಈಗ ಫಿನ್ಲೆಂಡ್‌ನ ಆಂತರಿಕ ಸಚಿವರು ಪುಟಿನ್ ಕ್ಷಮೆ ಯಾಚಿಸಿದರೂ ಅಲ್ಲಿ ಆಂತರಿಕ ನಡುಕ ನಿಂತಿಲ್ಲವಂತೆ. ವಿಷಯವನ್ನು ಮುಚ್ಚಿಟ್ಟರೂ ಬಹಿರಂಗಪಡಿಸಿದ ಫಿನ್ಲೆಂಡ್‌ನ ರೇಡಿಯೋ ಜಾಕಿಯ ಬೆನ್ನ ಹಿಂದೆ ಈಗ ಪೊಲೀಸರು ಬಿದ್ದಿದ್ದಾರಂತೆ. ದೊಡ್ಡವರಿಂದ ದೂರವಿರಿ ಎಂಬ ಗಾದೆ ಜಾಕಿಗೆ ಗೊತ್ತಿರಲಿಲ್ಲವೇನೋ!



ಪೀಟ್ಸಾ ತಿನ್ನುವುದು ಕೆಲವೊಮ್ಮೆ ಹಲ್ಲಿಗೆ ಕಸರತ್ತು ನೀಡಿದರೂ ತಯಾರಿಕೆಗೆ ಹೋಲಿಸಿದರೆ ಅಷ್ಟೇನೂ ಕಷ್ಟವಲ್ಲ ಬಿಡಿ. ಪೀಟ್ಸಾ ಮೂಲವಾದ ಇಟಲಿಯಲ್ಲಿ ಇತ್ತೀಚೆಗೆ ನಡೆದ ‘ವಿಶ್ವ ಪೀಟ್ಸಾ ಚಾಂಪಿಯನ್‌ಶಿಪ್’ನಲ್ಲಿ ಪಾಲ್ಗೊಂಡ ಸ್ಪರ್ಧಾಳುಗಳು ಈ ತಿನಿಸನ್ನು ಕೈಯಲ್ಲಿ ಮಾತ್ರವಲ್ಲ, ಕಾಲಲ್ಲೂ ತಯಾರಿಸಿ ತೋರಿಸಿದರು. ಫ್ರೀಸ್ಟೈಲ್, ಅಕ್ರೋಬ್ಯಾಟ್.. ಎಂದು ದೈಹಿಕ ಕಸರತ್ತು ಮಾಡುತ್ತಲೇ ಅದನ್ನು ತಯಾರಿಸಿದರು. ಇನ್ನು ಮುಂದೆ ಪೀಟ್ಸಾಗೆ ಆರ್ಡರ್ ಕೊಡುವ ಮುನ್ನ ಅದು ಕೈಯಿಂದಲೋ, ಕಾಲಿಂದಲೋ ಅಥವಾ ಹೊಟ್ಟೆಯಿಂದ ತಯಾರಿಸಿದ್ದಾ ಎಂದು ವಿಚಾರಣೆ ಪಟ್ಟಿಯಲ್ಲಿ ಸೇರಿಸಿಕೊಳ್ಳುವುದು ಒಳಿತು.



ಮಾಟಗಾರರು ಮತ್ತು ಮಾಟಗಾತಿಯರು ಚೆಂಡಿನಾಟ ಆಡಿದರೆ ಹೇಗಿರುತ್ತದೆ? ಪ್ರಸಿದ್ಧ ‘ಹ್ಯಾರಿ ಪಾಟರ್’ ಕಥೆಯಲ್ಲಿ ಇರುವಂತೆ ಪೊರಕೆಯ ಮೇಲೆ ಸವಾರಿ ಮಾಡುತ್ತ ಚೆಂಡಿನ ಹಿಂದೆ ಓಡುವ ಈ ಅರೆ ಭ್ರಮೆಯಾಟ ಪ್ರತಿ ವರ್ಷ ಅಮೆರಿಕಾದ ಫ್ಲಾರಿಡಾದಲ್ಲಿ ನಡೆಯುತ್ತದೆ. ಪೊರಕೆಯನ್ನು ಕಾಲುಗಳ ಮಧ್ಯೆ ಸಿಕ್ಕಿಸಿಕೊಳ್ಳುವ ಬದಲು ಕೈಯಲ್ಲಿ ಹಿಡಿದು ಬೆನ್ನಟ್ಟುವ ನಮ್ಮ ಪುರಾತನ ಆಟವಾಗಿದ್ದರೆ ಪ್ರೇಕ್ಷಕರನ್ನು ದೊಡ್ಡ ಸಂಖ್ಯೆಯಲ್ಲಿ ಸೇರಿಸಬಹುದಿತ್ತು,